# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.
# ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ : 3464 /2021

**ಚಾಸಾ :- 08 / ಪ್ರಾಸಾ :- 07**

| | |
|---|---|
| ಹೆಸರು | ಸತೀಶ್ |
| ತಂದೆ ಹೆಸರು | ಪಾಪಣ್ಣ |
| ವಯಸ್ಸು | 35 |
| ಉದ್ಯೋಗ | ಚಾಲಕ |
| ವಿಳಾಸ | ಸೀಗೆಕುಪ್ಪೆ |

**ದಿನಾಂಕ: 25.01.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 27.06.2021 ರಂದು ನಾನು ಟ್ರ್ಯಾಕ್ಟರ್ ನಲ್ಲಿ ಉಳುಮೆ ಮಾಡಲು ಹೋಗುತ್ತಿದ್ದಾಗ ಅಲ್ಲಿ ಜಗಳ ಮಡುತ್ತಿದ್ದರು, ಆಗ ಪೋಲಿಸರು ಅಲ್ಲಿಗೆ ಬಂದಿದ್ದರು ಸಹಿಯನ್ನು ಮಾಡಿರುತ್ತೇನೆ. ಸದರಿ ಮಹಜರನ್ನು ಸೀಗೆಕುಪ್ಪೆಗ್ರಾಮದಲ್ಲಿ ಮಾಡಿರುತ್ತೇನೆ. ಮಹಜರನ್ನು ಬೆಳಿಗ್ಗೆ 8.30 ರಿಂದ 9.30 ಗಂಟೆವೆರೆಗ ಜರುಗಿಸಿರುತ್ತಾರೆ. ಸದರಿ ಮಹರ್ ವೇಳೆಯಲ್ಲಿ ನಾನು, ಚಾಸಾ-7 ರವರು ಹಾಜರು ಇದ್ದೆವು.

**ಪಾಟೀ ಸವಾಲು :- ಶ್ರೀ. ಎಂ ಎಸ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ :-

ನಿಮ್ಮ ಸ್ಥಳ ಸೀಗೆಕುಪ್ಪೆ ಕಾಲೋನಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂದರೆ ಸೀಗೆಕುಪ್ಪೆಯಿಂದ 1 ಕಿ.ಮೀ. ದೂರ ಆಗುತ್ತದೆ ಎಂದರೆ ಸಾಕ್ಷಿ 800 ಮೀಟರ್ ಎಂದು ನುಡಿಯುತ್ತಾರೆ. ಸಹಿಯನ್ನು ಎಷ್ಟು ಕಡೆ

ಹಾಕಿರುತ್ತೀರಿ ಎಂದರೆ ಸಾಕ್ಷಿ ಒಂದೇ ಕಡೆ ಎಂದು ನುಡಿಯುತ್ತಾರೆ. ಸಹಿ ಹಾಕಿರುತ್ತೀರಿ ಎಂದು ಹೇಳಿದ್ದು ಸದರಿ ಪೇಪರ್ ನಲ್ಲಿ ಏನೆಲ್ಲಾ ಬರೆದಿರುತ್ತದೆ ಎಂದು ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸೀಗೆಕುಪ್ಪೆ ಗ್ರಾಮದಲ್ಲಿ 100-120 ಮನೆಗಳು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ಹಾಗೂ ನವೀನ ಮತ್ತು ನೀವು ಎಲ್ಲಾ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿ ಹಾಗೇನೂ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರ ಪರಿಚಯ ಇರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಯಾವುದೇ ಮಹಜರನ್ನು ಮಾಡಿರುವುದಿಲ್ಲ ನವೀನ್ ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.**
**ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3464 /2021**

**ಚಾಸಾ ಃ- 07 / ಪ್ರಾಸಾ ಃ- 06**

| | |
|---|---|
| ಹೆಸರು | ಜಗದೀಶ್ |
| ತಂದೆ ಹೆಸರು | ತಿಮ್ಮಯ್ಯ |
| ವಯಸ್ಸು | 51 |
| ಉದ್ಯೋಗ | ಶಿಕ್ಷಕರು |
| ವಿಳಾಸ | ಸೀಗೆಕುಪ್ಪೆ |

**ದಿನಾಂಕಃ 25.01.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿನಾಂಕ 27.06.2021 ರಂದು ಸೀಗೆಕುಪ್ಪೆ ಸ್ಕೂಲ್ ಹತ್ತಿರ ಮಹಜರ್ ವೇಳೆಯಲ್ಲಿ ಮಾಡಿರುತ್ತೇನೆ. ಮಹಜರನ್ನು 9.00 ರಿಂದ 9.30 ಗಂಟೆವೆರೆಗ ಜರುಗಿಸಿರುತ್ತಾರೆ. ಸದರಿ ಮಹರ್ ವೇಳೆಯಲ್ಲಿ ನಾನು, ಚಾಸಾ-8, ಪೋಲಿಸ್ ?ಅಧಿಕಾರಿಗಳು ಹಾಗೂ ಊರಿನ ಜನರು ಸೇರಿದ್ದರು.

**ಪಾಟೀ ಸವಾಲು ಃ- ಶ್ರೀ. ಎಂ ಎಸ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಮಹಜರ್ ನಲ್ಲಿ ಏನೆಲ್ಲಾ ಬರೆದಿದೆ ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಗಲಾಟೆ ಆಯಿತು ಮತ್ತು ಚಂದ್ರಕಲಾ ರವರು ಗಲಾಟೆ ಮಾಡಿರುತ್ತಾರೆ ಎಂಬ ವಿಷಯವನ್ನು ಮಹರಜ್ ನಲ್ಲಿ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಹಜರನ್ನು ನೀವು ಓದಿರುತ್ತೀರಾ ಎಂದರೆ ಸಾಕ್ಷಿ ಅವರು ನನ್ನ ಕೈಗೆ ಓದಲು ಕೊಟ್ಟಿರುತ್ತಾರೆ ನಾನು ಓದಿರುತ್ತೇನೆ

ಎಂದು ನುಡಿಯುತ್ತಾರೆ. ಸದರಿ ಮಹಜರ್ ನಲ್ಲಿ ಏನೆಲ್ಲಾ ಬರೆದಿದೆ ಎಂದು ನಿಖರವಾಗಿ ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಮುಖ್ಯಾಂಶಗಳನ್ನು ಹೇಳಬಹುದು ಎಂದು ನುಡಿಯುತ್ತಾರೆ. ಆ ದಿನ ನೀವು ಎಷ್ಟು ಕಡೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ನೆನಪು ಇರುವುದಿಲ್ಲ ಆದರೆ ಒಂದು ಕಡೆ ಮಾಡಿರಬಹುದು ಎಂದು ನುಡಿಯುತ್ತಾರೆ. ನೀವು ಪೋಲಿಸ್ ಠಾಣೆಗೆ ಹೋಗಿದ್ದಿರ ಎಂದರೆ ಸಾಕ್ಷಿ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಮಹಜರ್ ಗೆ ಕರೆದಿದ್ದರು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ಹಾಗೂ ನೀವು ವಿಶ್ವಾಸದಿಂದ ಚೆನ್ನಾಗಿ ಇದ್ದೀರಿ ಎಂದರೆ ಸಾಕ್ಷಿ ಹಾಗೇನೂ ಇಲ್ಲ ನಮ್ಮ ಊರಿನವರು ಎಂದು ನುಡಿಯುತ್ತಾರೆ.

ನಿಮ್ಮ ಊರು ಯಾವುದು ಎಂದರೆ ಸಾಕ್ಷಿ ಸೀಗೆಕುಪ್ಪೆ ಎಂದು ನುಡಿಯುತ್ತಾರೆ, ನೀವು ಎಲ್ಲಿ ಕೆಲಸ ಮಾಡುವುದು ಎಂದರೆ ಸಾಕ್ಷಿ ಪ್ರಸ್ತುತ ಗವಿನಾಗಮಂಗಲದಲ್ಲಿ ಮಾಡುತ್ತಿದ್ದು ಮಹಜರ್ ಸಮಯದಲ್ಲಿ ಕಲ್ಲುದೇವನಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ನಿಮ್ಮ ಕೆಲಸದ ಸಮಯ ಎಂದರೆ ಸಾಕ್ಷಿ 10.00 ರಿಂದ 4.15 ಎಂದು ನುಡಿಯುತ್ತಾರೆ. ನೀವು ಶಾಲೆಗೆ ಹೋಗಲು ನಿಮ್ಮ ಗ್ರಾಮವನ್ನು ಎಷ್ಟು ಗಂಟೆಗೆ ಬಿಡುತ್ತೀರಿ ಎಂದರೆ ಸಾಕ್ಷಿ 9.45 ಕ್ಕೆ ಎಂದು ನುಡಿಯುತ್ತಾರೆ. ನೀವು ಮಹಜರ್ ಆಗಿರುತ್ತದೆ ಎಂದು ಹೇಳಿದ್ದು ಸದರಿ ಸಮಯದಲ್ಲಿ ನೀವು ಹಾಜರು ಇದ್ದಿರಲಿಲ್ಲ ಹಾಗೂ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಲಕ್ಷ್ಮಮ್ಮ ಹಾಗೂ ಅವರ ಮಗನ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**